ದಾಖಲಿಸುತ್ತೇವೆ ಎಂದು ಹೇಳಿದರು, ನಾವು ವಾಪಸ್ಸು ಬಂದೆವು, ಆದರೆ ದೂರು ದಾಖಲಿಸದೇ ಇದ್ದುದರಿಂದ 3-4 ದಿನ ಬಿಟ್ಟು ನಾವು ಎಸ್ಪಿರವರಿಗೆ ದೂರನ್ನು ನೀಡಿದೆವು. ನನ್ನ ತಂದೆ ತಾಯಿಯವರು ಎಸ್ಪಿ ಕಛೇರಿಗೆ ದೂರು ನೀಡಲು ಹೋಗಿದ್ದರು, ನಾನು ಹೋಗಿರಲಿಲ್ಲ. ಘಟನೆಯ ಮಾರನೇ ದಿನ ದೂರು ಕೊಡಲು ಒಂದು ಸಲ ಬನ್ನೇರುಘಟ್ಟ ಪೋಲಿಸ್ ಠಾಣೆಗೆ ಹೋಗಿದ್ದನ್ನು ಬಿಟ್ಟರೆ ನಂತರ ನಾನು ಠಾಣೆಗೆ ಹೋಗಿರುವುದಿಲ್ಲ.

6. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ನನ್ನ ಕಾಲು ಹಿಡಿದು ಎಳೆದ ಎಂದು ಹೇಳಿದ್ದು ಆ ಬಗ್ಗೆ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿಲ್ಲ. ಸಾಕ್ಷಿ ಮುಂದುವರಿದು ಆರೋಪಿ ನನ್ನ ಕಾಲನ್ನು ಹಿಡಿದು ಎಳೆಯಲು ಮುಂದಾದಾಗ ನನ್ನ ತಂದೆ ತಾಯಿ ಬಂದು ಕಾಪಾಡಿದರು ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ನನ್ನ ಕಾಲು ಹಿಡಿದು ಎಳೆಯಲು ಮುಂದಾದಾಗ ನನ್ನ ತಂದೆ ತಾಯಿ ಬಂದು ಕಾಪಾಡಿದರು ಎಂಬ ವಿಚಾರವನ್ನು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆತ ನಮ್ಮ ಮನೆಯ ಬೀಗವನ್ನು ಸಹ ಹಾಕಿದ ಹಾಗೂ ಕುಡಿಯುವ ನೀರು ಬರಬಾರದೆಂದು ತೊಟ್ಟಿಗೂ ಸಹ ಆತ ಬೀಗ ಹಾಕಿದ್ದ ಹಾಗೂ ನಾನು ಸಹಾಯವಾಣಿ ಸಂಖ್ಯೆ 100 ಇದಕ್ಕೆ ಕರೆ ಮಾಡಿದೆ ಹಾಗೂ ಆಗ ಪೊಲೀಸರು ಬಂದರು ಹಾಗೂ ನನ್ನ ಹೆಂಡತಿ ಅತ್ತು ಕೇಳಿಕೊಂಡರೂ ಸಹ ಆರೋಪಿತರು ತೊಂದರೆ ಮಾಡಿದರು ಹಾಗೂ ಚಾಸಾ.5 ಮತ್ತು 6 ಇವರು ಸಹ ಗಲಾಟೆ ಮಾಡಬೇಡಿ ಎಂದು ಆರೋಪಿಗೆ ವಿನಂತಿಸಿದರು ಹಾಗೂ ನನ್ನ ಹೆಂಡತಿಗೆ ನೀನು ನಿನ್ನ ಮಗನನ್ನು ಕರೆದುಕೊಂಡು ಊರಿಗೆ ಹೋಗು ಈ ನನ್ ಮಕ್ಕಳನ್ನು ಒದ್ದು ಪೊಲೀಸ್ ಠಾಣೆಗೆ ಹಾಕುತ್ತೇನೆ ಎಂದು ಆರೋಪಿ ಹೇಳಿದ ಎಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

8. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ನಾರಾಯಣಸ್ವಾಮಿ ನಮಗೆ ಒಡ್ಡ, ಮಡ್ಡ, ಕೂಕಾ ಅಂತೆಲ್ಲಾ ಬೈದರು ಹಾಗೂ ನಮ್ಮನ್ನೆಲ್ಲಾ ಹೊಡೆದು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದರು ಹಾಗೂ ನನ್ನ ತಂದೆ ಕೇಳಿದಾಗ ಆರೋಪಿ ನಾರಾಯಣಸ್ವಾಮಿ ನನ್ನ ತಂದೆಗೆ ಹೊಡೆದ ಹಾಗೂ ನನಗೆ ಅಪಘಾತವಾಗಿದ್ದರಿಂದ ನಾನು ಮನೆಯಲ್ಲಿ ಮಲಗಿದ್ದೆ ಎಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

9. ನನ್ನ ತಂದೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆಯಲಿಲ್ಲ. ನನ್ನ ಮೊಬೈಲ್ ಸಂಖ್ಯೆ 9986604533 ಮತ್ತು 6360578478 ಇತ್ತು. ಈ ಎರಡು ನಂಬರ್ ಗಳು ನನ್ನ ಹೆಸರಿನಲ್ಲಿ ಈಗಲೂ ಇರುತ್ತವೆ. ಪೋಲಿಸರು ನನ್ನ ಫೋನನ್ನು ಜಪ್ತಿ ಮಾಡಿಕೊಳ್ಳಲಿಲ್ಲ.

10. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನನ್ನ ತಂದೆಗೆ ಹೊಡೆಯಲಿಲ್ಲ ಹಾಗೂ ನನ್ನ ಕಾಲು ಎಳೆಯಲಿಲ್ಲ ಹಾಗೂ ನಾನು ಪೋಲಿಸರಿಗೆ ಫೋನ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ನಮ್ಮೊಂದಿಗೆ ಗಲಾಟೆ ಮಾಡಿಲ್ಲ ಹಾಗೂ ನಮಗೆ ಅಸಭ್ಯವಾಗಿ ಬೈದಿಲ್ಲ ಹಾಗೂ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ.

11. ಆರೋಪಿಯಿಂದ ಹಣವನ್ನು ಪಡೆದು ಖರೀದಿ ಪತ್ರವನ್ನು ಮಾಡಿಕೊಡದೇ ಹಣವನ್ನು ವಾಪಸ್ಸು ಕೊಡದೇ ಹಾಗೂ ಮನೆಯನ್ನು ಖಾಲಿ ಮಾಡಿಕೊಡದೇ ಅವರ ವಿರುದ್ದ ಸುಳ್ಳು ಕೇಸ್ ಹಾಕಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು